e ಜೀವನ

# ಐಟಿ ಬಗ್ಗೆ ಈ ಧೋರಣೆ ಸರಿಯೇ?

ಉದ್ಯಮವೊಂದರ ಬೆಳವಣಿಗೆಗೆ ಅನೇಕರ ಚಿಂತನೆ, ಮುಂದಾಲೋಚನೆ ಮತ್ತು ಸಹಕಾರಗಳು ಅತ್ಯಗತ್ಯ. ಆದರೆ, ಅವೆಲ್ಲವುಗಳಿಗಿಂತ ಮಿಗಿಲಾದುದು ಸರ್ಕಾರದ ಪ್ರೋತ್ಸಾಹ ಮತ್ತು ಕಾಯ್ದೆ-ಕಾನೂನುಗಳ ಸರಳೀಕರಣ. ಭಾರತೀಯ ಐಟಿ ಉದ್ಯಮದ ಮಟ್ಟಿಗಂತೂ ಇವೆರಡೂ ವಿಚಾರಗಳಲ್ಲಿ ಸರ್ಕಾರದಿಂದ ಪೂರ್ಣ ಬೆಂಬಲ ದೊರೆತಿದೆ. ಐಟಿ ಕ್ಷೇತ್ರದ ಇಂದಿನ ನಾಗಾಲೋಟಕ್ಕೆ ಸರ್ಕಾರದ ಪ್ರೋತ್ಸಾಹಕ ಕಾರ್ಯಕ್ರಮಗಳೇ ಕಾರಣ ಎಂದರೆ ತಪ್ಪಾಗಲಾರದು. ಕಳೆದ ವರ್ಷ ವಿಶ್ವದಾದ್ಯಂತ ಐಟಿ ಉದ್ಯಮವು ಎದುರಿಸಿದ ಕಠಿಣ ಪರಿಸ್ಥಿತಿಯ ನಡುವೆಯೂ ಭಾರತೀಯ ಐಟಿ ತನ್ನ ಉತ್ತಮ ಸಾಧನೆಯನ್ನು ಕಾಯ್ದುಕೊಂಡು, ಶೇ. 50ರಷ್ಟು ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿತು. ಮುಂದುವರಿದ ವಿಶ್ವ ಆರ್ಥಿಕ ಹಿನ್ನಡೆಯ ಛಾಯೆಯಲ್ಲೂ, ಈ ವರ್ಷ ಮತ್ತೆ ಶೇ. 30ರಷ್ಟು ಬೆಳವಣಿಗೆಯನ್ನು ಭಾರತೀಯ ಐಟಿ ಸಾಧಿಸುವ ನಿರೀಕ್ಷೆಯಿದೆ.

ಐಟಿ ಉದ್ಯಮ ತನ್ನ ಸಹಜ ಸಾಮರ್ಥ್ಯದಿಂದ ಮುನ್ನಡೆ ಸಾಧಿಸಲು ಇಂದು ಶಕ್ತವಾಗಿದೆ. ಆದರೂ ತನ್ನ ಬೆಳವಣಿಗೆಗೆ ಇದು ಸರ್ಕಾರದ ಮೇಲೆ ಅವಲಂಬಿತವಾಗಿದೆ. ತನ್ನ ಉತ್ತಮ ಪ್ರದರ್ಶನವನ್ನು ಮುಂದುವರಿಸಲು ಸರ್ಕಾರದಿಂದ ಐಟಿ ಉದ್ಯಮ ನಿರೀಕ್ಷಿಸಿದ್ದಿಷ್ಟೇ— ತನ್ನೆಲ್ಲಾ ಪ್ರೋತ್ಸಾಹ ಕಾರ್ಯಕ್ರಮಗಳನ್ನು ಇನ್ನೂ ಕೆಲವು ವರ್ಷಗಳ ಮಟ್ಟಿಗೆ ಮುಂದುವರೆಸುವುದೆಂದು. ಆದರೆ 2002-2003ನೇ ಸಾಲಿನ ಕೇಂದ್ರ ಬಜೆಟ್ ಈ ನಿರೀಕ್ಷೆಯನ್ನು ಹುಸಿಗೊಳಿಸಿದೆ.

ಆರ್ಥಿಕ ಹಿನ್ನಡೆಯಿಂದ ಈಗಾಗಲೇ ಸಾಕಷ್ಟು ಹಾನಿಗೊಳಗಾಗಿರುವ ಭಾರತದ ಐಟಿ ಉದ್ಯಮ ಈ ಬಜೆಟ್‌ನಲ್ಲಿ ಕೆಲವು ನಿರೀಕ್ಷೆಗಳನ್ನಿಟ್ಟುಕೊಂಡಿತ್ತು. ಮೊದಲನೆಯದಾಗಿ ತೆರಿಗೆ ಕಾಯಿದೆಯ 10A (9) ಮತ್ತು 10B (9) ಸೆಕ್ಷನ್‌ಗಳ ನಿರ್ಮೂಲನ. ಈ ಸೆಕ್ಷನ್‌ಗಳ ಪ್ರಕಾರ ಯಾವುದೇ ಎರಡು ಕಂಪನಿಗಳು ಒಂದಾದಾಗ ಆ ಕಂಪನಿಯ ವಾರಸುದಾರಿಕೆಯ ಬದಲಾವಣೆಯಿಂದ ಅದಕ್ಕೆ ಸಿಗುವ ತೆರಿಗೆ ವಿನಾಯಿತಿ ಇಲ್ಲದಂತಾಗುತ್ತದೆ. ಉದಾಹರಣೆಗೆ, ರಫ್ತುನಿರತ ಕಂಪೆನಿಯೊಂದರಲ್ಲಿ ಬಹು ಶೇರು ಪಾಲು (ಶೇ. 51) ಹೂಡಿಕೆ ಬದಲಾವಣೆಯಾದರೆ, ಕೂಡಲೇ ಆ ಕಂಪೆನಿಗೆ ಯಾವುದೇ ತೆರಿಗೆ ವಿನಾಯಿತಿ ಇಲ್ಲದಂತಾಗುತ್ತದೆ. ಇದು ಕಂಪನಿಗಳ ಮಿಲನ ಹಾಗೂ ಖರೀದಿ ಪ್ರಕ್ರಿಯೆಗೆ ತಡೆಯೊಡ್ಡುತ್ತದೆ. ಸಣ್ಣ ಉದ್ದಿಮೆಗಳಿಗೆ ಇದರಿಂದ ಬಹಳಷ್ಟು ಹಾನಿ ಖಂಡಿತ. ಆದ್ದರಿಂದ ಈ ಸೆಕ್ಷನ್‌ಗಳನ್ನು ಸರ್ಕಾರ ಸೂಕ್ತವಾಗಿ ಬದಲಾಯಿಸುವುದು ಅಥವಾ ಸಂಪೂರ್ಣವಾಗಿ ನಿರ್ಮೂಲನಗೊಳಿಸುವುದೆಂದು ಐಟಿ ಉದ್ಯಮ ನಿರೀಕ್ಷಿಸಿತ್ತು. ಹಾಗೆಯೇ ಕಸ್ಟಂ ಬಾಂಡಿಂಗ್‌ಗೆ ಸಂಬಂಧಿಸಿದ ಅಡೆತಡೆಗಳನ್ನು ಸರ್ಕಾರ ತೆಗೆದುಹಾಕುವುದೆಂಬ ಅಂದಾಜೂ ಇತ್ತು. ಆದರೆ, ಈ ಬಾರಿಯ ಕೇಂದ್ರ ಬಜೆಟ್ ನಿರಾಸೆಯುಂಟುಮಾಡುವುದರ ಜೊತೆಗೆ, ಭಾರತೀಯ ಐಟಿಯ ಶರವೇಗದ ಬೆಳವಣಿಗೆಗೆ ಕಡಿವಾಣ ಹಾಕಿದೆ.

ಸರ್ಕಾರ ಅನೇಕ ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಿರುವ ಶೂನ್ಯ ತೆರಿಗೆ ಪದ್ಧತಿಯಿಂದ ಭಾರತವು ಐಟಿ ಪ್ರಗತಿಯನ್ನು ಸಾಧಿಸಿದ್ದಷ್ಟೇ ಅಲ್ಲದೆ, ಹೆಚ್ಚು ಉದ್ಯೋಗ ಸೃಷ್ಟಿ, ವಿದೇಶಿ ವಿನಿಮಯ ಮತ್ತು ಬಂಡವಾಳ ಹಾಗೂ ಹೆಚ್ಚು ವಿದೇಶಿ ಕಂಪೆನಿಗಳನ್ನು ಆಕರ್ಷಿಸುವುದರಲ್ಲಿ ಯಶಸ್ವಿಯಾಗಿತ್ತು. ಈ ಐಟಿ-ಸಹಾಯಕ ಕಾರ್ಯಕ್ರಮಗಳ ನೆರವಿನಿಂದ ಇಂದು ನಮ್ಮ ದೇಶದ ಬಹುರಾಷ್ಟ್ರೀಯ ಕಂಪನಿಗಳ ರಫ್ತು 1.2 ಬಿಲಿಯ ಡಾಲರ್ ಮುಟ್ಟುವತ್ತ ಸಾಗಿದೆ. ಹೀಗಿದ್ದೂ ಕೇಂದ್ರ ಬಜೆಟ್‌ನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಆದಾಯದ ಮೇಲೆ ತೆರಿಗೆ ವಿನಾಯಿತಿಯನ್ನು ಸೆಕ್ಷನ್ 10A ಮತ್ತು 10B ಅಡಿಯಲ್ಲಿ ಶೇ. 100ರಿಂದ ಶೇ. 90ಕ್ಕೆ ಇಳಿಸಿರುವುದು ದುರ್ದೈವದ ಸಂಗತಿ. ಈ ರಫ್ತು ತೆರಿಗೆಯು SME ಕ್ಷೇತ್ರಕ್ಕೂ ಹೊಡೆತ ನೀಡಲಿದೆ.

ನ್ಯಾಸ್‌ಕಾಮ್‌ನ (NASSCOM) ಸಮೀಕ್ಷೆಯೊಂದರ ಪ್ರಕಾರ, ಮಾರ್ಚ್ 2001-2002ರ ಅವಧಿಯಲ್ಲಿ ಭಾರತದ ಐಟಿ ತಂತ್ರಜ್ಞರ ಸಂಖ್ಯೆ 4,30,000ದಿಂದ 5,22,000ಕ್ಕೇರಿದೆ. ವರ್ಷವೊಂದರಲ್ಲಿ ಸುಮಾರು 1 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಬೇರಾವುದೇ ಉದ್ಯಮಕ್ಕೆ ಈವರೆಗೆ ಸಾಧ್ಯವಾಗಿಲ್ಲ. 2005ರ ಹೊತ್ತಿಗೆ ಸುಮಾರು 2.1 ಮಿಲಿಯ ತಂತ್ರಜ್ಞರಿಗೆ ಉದ್ಯೋಗ ದೊರೆಯುವುದೆಂಬ ನಿರೀಕ್ಷೆಯಿದೆ. ಇದೇ ಸಮೀಕ್ಷೆಯ ಪ್ರಕಾರ, ಸಾಫ್ಟ್‌ವೇರ್ ರಫ್ತಿನಿಂದ ಸುಮಾರು 1,000 ಕೋಟಿ ರೂ. ಆದಾಯ ತೆರಿಗೆಯು 2001-02ರ ಸಾಲಿನಲ್ಲಿ ಸರ್ಕಾರಕ್ಕೆ ಸಂದಾಯವಾಗಿದೆಯೆಂದು ಅಂದಾಜಿಸಲಾಗಿದೆ. ಇದು ಮುಂದಿನ ಮೂರು ವರ್ಷಗಳಲ್ಲಿ 3,500 ಕೋಟಿ ರೂ.ವನ್ನು ಮುಟ್ಟಬಹುದೆಂದು ನಿರೀಕ್ಷಿಸಲಾಗಿದೆ.

ಇಂತಹ ಬೃಹತ್ ಪ್ರಮಾಣದಲ್ಲಿ ತೆರಿಗೆಯನ್ನು ತೆರುವ, ಉದ್ಯೋಗಗಳನ್ನು ಕಲ್ಪಿಸುವ ಮತ್ತು ಸರ್ವಾಂಗೀಣ ಆರ್ಥಿಕ ಪ್ರಗತಿಗೆ ದಾರಿದೀಪವಾಗಿರುವ ಐಟಿ ಕ್ಷೇತ್ರದ ಬಗ್ಗೆ ಸರ್ಕಾರದ ಈ ನಿಲುವು ಸರಿಯೇ?

ಜೆ.ಪಿ. ವಿನಯಬಾಬು